# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ದಿವಂಗತ ಸತ್ಯನಾರಾಯಣ ರವರ ಪತ್ನಿ ಶ್ರೀಮತಿ ಲಕ್ಷ್ಮೀದೇವಿ ಇವರಿಗೆ ಡಿ.ಸಿ.ಆರ್.ಜಿ. ಮೊತ್ತವನ್ನು ಪಾವತಿಸುವಲ್ಲಿ ಆದ ವಿಳಂಬದ ಅವಧಿಗೆ ಬಡ್ಡಿ ನೀಡುವ ಬಗ್ಗೆ – ಪರಿಷ್ಕೃತ ಆದೇಶ.

**ಓದಲಾಗಿದೆ:-**

1. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ. 5093/2004, ದಿನಾಂಕ. 21-04-2010
2. ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 310 ಜಿಪಅ 2010, ದಿನಾಂಕ. 29-03-2012.
3. ಖಜಾನೆ ನಿರ್ದೇಶಕರು, ಬೆಂಗಳೂರು ಇವರ ಪತ್ರ ಸಂಖ್ಯೆ. ಖನಿ/ಬಿಯುಡಿ(2)ಸಿಆರ್-86/11-12, ದಿನಾಂಕ. 10-04-2012.

*****

**ಪ್ರಸ್ತಾವನೆ:**

ಶ್ರೀ ಎಸ್.ಸತ್ಯನಾರಾಯಣ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು (ಪ್ರಸ್ತುತ ನಿಧನ) ಇವರು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಬೈಲಹೊಂಗಲ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಉಗ್ರಾಣ ಸಾಮಗ್ರಿಗಳ ರೂ. 15,42,900-00 ಗಳ ಕೊರತೆ ಕಂಡು ಬಂದಿದ್ದರಿಂದ ಅವರ ಡಿ.ಸಿ.ಆರ್.ಜಿ. ಹಣದಲ್ಲಿ ರೂ. 2.50 ಲಕ್ಷಗಳ ಹಣವನ್ನು ತಡೆಹಿಡಿಯಲಾಗಿತ್ತು. ಅವರ ಮರಣದ ನಂತರ ಅವರ ಪತ್ನಿ ಶ್ರೀಮತಿ ಎಸ್.ಲಕ್ಷ್ಮೀದೇವಿ ಇವರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಸಲ್ಲಿಸಿದ್ದ ಅರ್ಜಿ ಸಂಖ್ಯೆ 5093/2004ರಲ್ಲಿ ದಿವಂಗತ ಎಸ್. ಸತ್ಯನಾರಾಯಣ ರವರ ಪತ್ನಿಗೆ ನಿವೃತ್ತಿ ಸೌಲಭ್ಯಗಳನ್ನು ದಿನಾಂಕ. 1-7-2001 ರಿಂದ ಅನ್ವಯವಾಗುವಂತೆ ಶೇಕಡಾ 12ರ ಬಡ್ಡಿಯೊಂದಿಗೆ 3 ತಿಂಗಳೊಳಗಾಗಿ ಪಾವತಿಸುವಂತೆ ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ. 21-04-2010ರಲ್ಲಿ ತೀರ್ಪು ನೀಡಿತ್ತು. ಆದುದರಿಂದ ಶ್ರೀಮತಿ ಎಸ್. ಲಕ್ಷ್ಮೀದೇವಿ ಇವರಿಗೆ ಡಿ.ಸಿ.ಆರ್.ಜಿ. ಮೊತ್ತವನ್ನು ಪಾವತಿಸುವಲ್ಲಿ ಆದ ವಿಳಂಬದ ಅವಧಿಗೆ ರೂ. 2,33,205.47 ಗಳ ಬಡ್ಡಿಯನ್ನು ಪಾವತಿಸಲು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ. 29-03-2012ರ ಆದೇಶದಲ್ಲಿ ಸರ್ಕಾರದ ಮಂಜೂರಾತಿ ನೀಡಲಾಗಿತ್ತು.

ಖಜಾನೆ ನಿರ್ದೇಶಕರು, ಬೆಂಗಳೂರು ರವರು ಮೇಲೆ ಕ್ರಮ ಸಂಖ್ಯೆ (6)ರಲ್ಲಿ ಓದಲಾದ ದಿನಾಂಕ. 10-04-2012ರ ಪತ್ರದಲ್ಲಿ ದಿನಾಂಕ. 29-03-2012ರಂದು ಹೊರಡಿಸಲಾದ ಸರ್ಕಾರದ ಆದೇಶವು 2011-12ನೇ ಸಾಲಿನದ್ದಾಗಿದ್ದು, ದಿನಾಂಕ. 31-03-2012ಕ್ಕೆ ವ್ಯಪಗತವಾಗುವುದರಿಂದ 2012-13ನೇ ಸಾಲಿಗೆ ಪರಿಷ್ಕೃತ ಆದೇಶ ಹೊರಡಿಸುವಂತೆ ಕೋರಿದ್ದಾರೆ. ಅದರಂತೆ ಈ ಕೆಳಕಂಡ ಆದೇಶ.

**<u>ಆದೇಶ ಸಂಖ್ಯೆ. ಗ್ರಾಅಪ 310 ಜಿಪಅ 2010, ಬೆಂಗಳೂರು, ದಿನಾಂಕ.17-05-2012</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 310 ಜಿಪಅ 2010, ದಿನಾಂಕ. 29-03-2012ರಂದು ಹೊರಡಿಸಲಾಗಿರುವ ಆದೇಶವು ದಿನಾಂಕ. 31-03-2012ಕ್ಕೆ ವ್ಯಪಗತವಾಗುವುದರಿಂದ, ಸದರಿ ಆದೇಶವನ್ನು 2012-13ನೇ ಸಾಲಿಗೆ ಅನ್ವಯವಾಗುವಂತೆ ನವೀಕರಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

17/5/12
(ಎನ್.ವೈ.ಸಾಗರ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 & 2) / (ಆಡಿಟ್)
2. ಸರ್ಕಾರದ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ಖಜಾನೆ ನಿರ್ದೇಶಕರು, ಬೆಂಗಳೂರು.
4. ಉಪ ನಿರ್ದೇಶಕರು, ಜಿಲ್ಲಾ ಖಜಾನೆ, ಬೆಳಗಾವಿ.
5. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ರಿಸಾಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು.
6. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕೆ.ಆರ್.ಆರ್.ಡಿ.ಎ., ರಾಜಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು.
7. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.
8. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ
9. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಳಗಾವಿ
10. ಸರ್ಕಾರಿ ವಕೀಲರು, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬಿ.ಡಿ.ಎ. ಕಾಂಪ್ಲೆಕ್ಸ್, ಇಂದಿರಾನಗರ, ಬೆಂಗಳೂರು – ನಿಂದನಾ ಅರ್ಜಿ ಸಂಖ್ಯೆ 38/2012, ದಿನಾಂಕ. 03-02-2012. (ಅರ್ಜಿ ಸಂಖ್ಯೆ. 5093/2004, ದಿನಾಂಕ. 21-04-2010ರ ತೀರ್ಪು)
11. ಶ್ರೀಮತಿ ಎಸ್. ಲಕ್ಷ್ಮೀದೇವಿ, ದಿವಂಗತ ಎಸ್. ಸತ್ಯನಾರಾಯಣ ರವರ ಪತ್ನಿ, ಕೇರಾಫ್ ಸಿದ್ದಪ್ಪ, ನಂ.9, 2ನೇ ಹಂತ, ಕೆ.ಹೆಚ್.ಬಿ.ಕಾಲೋನಿ, ಹೊಳಲ್ಕೆರೆ ರಸ್ತೆ, ಚಿತ್ರದುರ್ಗ.
12. ಗ್ರಾ.ಅ.ಪಂ.ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್)/ ಉಪ ಕಾರ್ಯದರ್ಶಿ ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
13. ರಕ್ಷಾ ಕಡತ / ಮಾಹಿತಿ ಕೇಂದ್ರ/ ಹೆಚ್ಚುವರಿ ಪ್ರತಿಗಳು.